

ಕಥೆ

# ಬರ್ತ್‌ಡೇ

■ ಡಾ. ಅಶೋಕ ಗೋಧಿ

ಈ ತರದ ಬಯಾಪ್ಸಿ ಇದಕ್ಕೂ ಮೊದಲು ಎಷ್ಟೋ ಸಲ ನಾನು ಮಾಡಿದ್ದೆನಲ್ಲದೆ, ಅದರ ವರದಿಯನ್ನು ಹೇಳುವಾಗ ದಂಪತಿಗಳಲ್ಲಿ ಉಂಟಾಗುವ ಕುತೂಹಲ ಮತ್ತು ಆಸೆ ನಿರಾಸೆಗಳಿಂದ ಕೂಡಿದ ಭಾವನೆಗಳ ತಳಮಳದ ಚೆನ್ನಾದ ಪರಿಚಯ ನನಗಿದೆ. ಮತ್ತಿತರ ಅನೇಕ ಕೇಸುಗಳಂತೆ ಇದೂ ಕೂಡ ಎಂದೆನಿಸಿ ಬಯಾಪ್ಸಿ ರಿಪೋರ್ಟ್ ಕುರಿತು ಆದಷ್ಟು ನಿರ್ವಿಕಾರತೆಯಿಂದ ಹೇಳಬೇಕೆಂದು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗದೆ ಹೋಯಿತು.

ತನಗೆ ಮಕ್ಕಳಾಗುವ ಸಾಧ್ಯತೆಯೇ ಇಲ್ಲವೆಂದು ತಿಳಿದಾಗ ಇಪ್ಪತ್ತೆಂಟರ ಹರೆಯದ ಸತೀಶನ ಮುಖ ಕಳೆಗುಂದಿತ್ತು. ಸತೀಶನ ಪತ್ನಿಯ ರಿಪೋರ್ಟ್‌ಗಳ ಪ್ರಕಾರ ಆಕೆಯಲ್ಲಿ ಯಾವ ದೋಷವೂ ಇರಲಿಲ್ಲ. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಸತೀಶನನ್ನು ತಾಯಿ ಅಕ್ಕರೆಯಿಂದ ಸಾಕಿ ಸಲುಹಿ ಕಷ್ಟಪಟ್ಟು ಓದಿಸಿದ್ದಳು. ಪಾಲಿಟೆಕ್ನಿಕ್ ಪಾಸು ಮಾಡಿಕೊಂಡ ಸತೀಶನಿಗೆ ಇದೇ ಊರಿನಲ್ಲಿ ಕೆಲಸ ದೊರೆಯಿತು. ಸತೀಶನಿಗೆ ಸರಿಯಾದ ಹೆಣ್ಣು ದೊರೆತು ಮದುವೆ ಮಾಡಿದಾಗ ಅವನ ತಾಯಿಗೆ ಆದ ಸಂತೋಷಕ್ಕೆ ಪಾರವೇ ಇಲ್ಲ. ಮದುವೆಯಾದ ನಂತರ ಎರಡೂವರೆ ವರ್ಷಗಳುರುಳಿದ್ದು ಗೊತ್ತಾಗಲೇ ಇಲ್ಲ. ಕಷ್ಟ ಕಾರ್ಪಣ್ಯಗಳನ್ನುಂಡ ಹೆಣ್ಣು ಜೀವಕ್ಕೆ ಮೊಮ್ಮಕ್ಕಳನ್ನು ನೋಡುವ ಹಿರಿಯಾಸೆ. ಇದೆಲ್ಲವನ್ನು ಹೇಳುತ್ತ ಸತೀಶ ಕಣ್ಣಲ್ಲಿ ನೀರು ತಂದಿದ್ದ.

ಇದು ನಡೆದದ್ದು ಸ್ತ್ರೀರೋಗ ತಜ್ಞನಾದ ನನ್ನ ಸ್ನೇಹಿತನ ನರ್ಸಿಂಗ್ ಹೋಮ್‌ನಲ್ಲಿ. ಮಕ್ಕಳಾಗದ ಅನೇಕ ದಂಪತಿಗಳು ತಪಾಸಣೆ ಮತ್ತು ಸಲಹೆಗಾಗಿ ನನ್ನ ಸ್ನೇಹಿತನ ಕಡೆಗೆ ಬರುತ್ತಿದ್ದರು. ಸ್ತ್ರೀಯ ತಪಾಸಣೆ ಮಾಡಿಯಾದ ಮೇಲೆ, ಪುರುಷನ ತಪಾಸಣೆಗಾಗಿ ನನ್ನನ್ನು ಕರೆಸುತ್ತಿದ್ದ. ಇಂಥ ಒಂದು ಸಂದರ್ಭದಲ್ಲಿ ಸತೀಶನ ತಪಾಸಣೆ ನಡೆಸಿ ಬಯಾಪ್ಸಿ ಮಾಡಿದ್ದೆ. ಈ ಕೇಸಿನಲ್ಲಿ ನಾನು ಮಾಡುವಂಥದೇನೂ ಇರಲಿಲ್ಲವಾದ್ದರಿಂದ ಸತೀಶನಿಗೆ ಒಂದೆರಡು ವಾಡಿಕೆಯ ಸಾಂತ್ವನಪೂರ್ವಕ ಮಾತು ಹೇಳಿ ಬಂದಿದ್ದೆ. ಹೊರಗೆ ಬರುವಾಗ ವೇಟಿಂಗ್ ರೂಮಿನಲ್ಲಿ ಕುಳಿತ ಒಂಟಿ ಹೆಂಗಸನ್ನು ನೋಡಿದಾಕ್ಷಣ ಈಕೆಯನ್ನು ಎಲ್ಲೋ ನೋಡಿದ್ದೇನೆಂದೆನಿಸಿತು. ಬಹುಶಃ ಸತೀಶನ ಪತ್ನಿ ಇರಬಹುದೆಂದುಕೊಂಡು ನಾನು ಬಂದುಬಿಟ್ಟೆ.

ಇದಾದ ಸುಮಾರು ಒಂದು ವಾರ ಕಳೆದ ಮೇಲೆ ಸ್ನೇಹಿತನೊಂದಿಗೆ ಹರಟುತ್ತ ಕುಳಿತಾಗ ಸತೀಶನ ಕೇಸಿನ ಬಗ್ಗೆ ವಿಚಾರಿಸಿದೆ. ಇದು ವೈದ್ಯರಿಬ್ಬರು ಹರಟುವ ಸಾಮಾನ್ಯ ವಿಷಯವಾಗಿತ್ತೇ ವಿನಃ ಈ ಹಂತದಲ್ಲಿ ನನಗೆ ಅದರ ಬಗ್ಗೆ ಹೆಚ್ಚಿನ ಕುತೂಹಲವೇನೂ ಇರಲಿಲ್ಲ. 'ಪರಪುರುಷನ ವೀರ್ಯದಾನ' ಇಲ್ಲವೆ 'ದತ್ತು ತೆಗೆದುಕೊಳ್ಳುವುದು' ಎರಡೂ ವಿಧಾನಗಳ ಸಾಧಕ ಬಾಧಕಗಳನ್ನು ವಿವರಿಸಿ ದಂಪತಿಗಳಿಗೆ ಹೇಳಿ ಕಳಿಸಿರುವುದಾಗಿ ಸ್ನೇಹಿತ ಹೇಳಿದ.

ಇದಾದ ಬಳಿಕ ಹತ್ತು ಹನ್ನೆರಡು ದಿನಗಳು ಉರುಳಿರಬಹುದು. ಮಧ್ಯಾಹ್ನದ ನಿದ್ದೆಯ ಸಮಯ; 'ಟ್ರಣ್ ಟ್ರಣ್' ಫೋನಿನ ಸದ್ದು. ಸಿಟ್ಟು ಮತ್ತು ಬೇಸರ ಎದ್ದು ಕಾಣುವಂತೆ 'ಹಲೋ' ಎಂದೆ. 'ಹಲೋ' ಆ ಕಡೆಯಿಂದ ಹೆಣ್ಣು ಧ್ವನಿ. ತನ್ನನ್ನು ಭೂದೇವಿ ಎಂದು ಪರಿಚಯಿಸಿಕೊಂಡ ಆಕೆ, ತನ್ನನ್ನು ನಾನು ಗುರುತು ಹಿಡಿದಿರಲಿಕ್ಕಿಲ್ಲವೆಂದು ಸರಿಯಾಗಿಯೇ ಊಹಿಸಿ, ಕೂಡಲೇ 'ಸತೀಶನ ಹೆಂಡತಿ' ಎಂದು ಹೇಳಿ, ಸತೀಶ ನನ್ನನ್ನು ಭೆಟ್ಟಿಯಾದ ಸಂದರ್ಭವನ್ನು ವಿವರಿಸಿದಳು.

'ಹೇಗಿದ್ದೀರಿ' ಮುಂತಾದ ಲೋಕಾಭಿರಾಮದ ಮಾತುಗಳಾದ ಮೇಲೆ, ನನ್ನನ್ನು ಕಂಡು